# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **638** |
| ಸದಸ್ಯರ ಹೆಸರು | : | ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ವಿವಿಧ ಎಸ್ಕಾಂಗಳ ವ್ಯಾಪ್ತಿಯಲ್ಲಿ 2025ನೇ ಸಾಲಿನಲ್ಲಿ ವಿದ್ಯುತ್ ಸಂಪರ್ಕ ಕೋರಿ ಇಲ್ಲಿಯವರೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಸದರಿ ಅರ್ಜಿಗಳಲ್ಲಿ ಇಲ್ಲಿಯವರೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ತಿರಸ್ಕರಿಸಿರುವ ಮತ್ತು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ಎಸ್ಕಾಂವಾರು ಸಂಪೂರ್ಣ ವಿವರ ನೀಡುವುದು) | ಆರ್ಥಿಕ ವರ್ಷ 2024-25 ಮತ್ತು 2025-26ನೇ ಸಾಲಿನಲ್ಲಿ (ಏಪ್ರಿಲ್ 2025 ರಿಂದ ಜುಲೈ 2025 ರ ಅಂತ್ಯಕ್ಕೆ) ವಿದ್ಯುತ್ ಸಂಪರ್ಕ ಕೋರಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸ್ವೀಕೃತವಾದ ಎಲ್ಲಾ ಜಕಾತಿಯ ಅರ್ಜಿಗಳು, ವಿದ್ಯುತ್ ಸಂಪರ್ಕ ನೀಡಿರುವ ಮತ್ತು ಬಾಕಿಯಿರುವ ಅರ್ಜಿಗಳ ಸಂಖ್ಯೆಗಳ ಎಸ್ಕಾಂವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ |
| ಆ) | ರಾಜ್ಯದಲ್ಲಿನ ವಿವಿಧ ಎಸ್ಕಾಂಗಳ ವ್ಯಾಪ್ತಿಯಲ್ಲಿ ಠೇವಣಿ ಪಾವತಿಸಿ, ವಿದ್ಯುತ್ ಸಂಪರ್ಕ ಕೋರಿರುವ ಸಾವಿರಾರು ಅರ್ಜಿದಾರರಿಗೆ ಇದುವರೆಗೂ ವಿದ್ಯುತ್ ಸಂಪರ್ಕ ಸಿಗದೇ ಅತ್ಯಂತ ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿದ್ಯುತ್ ಸಂಪರ್ಕ ನೀಡುವ ಮುನ್ನ ವಿದ್ಯುತ್ ಸರಬರಾಜು ಕಂಪನಿಗಳು, ಸದರಿ ಕಟ್ಟಡಗಳ ಮಾಲೀಕರು ಒಸಿ ಮತ್ತು ಸಿಸಿ ಹಾಜರುಪಡಿಸಿದ ನಂತರವೇ ವಿದ್ಯುತ್ ಸಂಪರ್ಕ ನೀಡುವಂತೆ ಆದೇಶಿಸಿರುತ್ತದೆ. ಸದರಿ ಆದೇಶವು ಹಾಲಿ ಬಾಕಿ ಇರುವ ಎಲ್ಲಾ ಅರ್ಜಿಗಳಿಗೆ ಅನ್ವಯವಾಗುವುದರಿಂದ ಒಸಿ ಮತ್ತು ಸಿಸಿ ಹಾಜರು ಪಡಿಸಿರುವ ಎಲ್ಲಾ ಪ್ರಕರಣಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಮೇಲಿನ ಆದೇಶವು ಎಲ್ಲಾ ವಿಧದ ನಿವೇಶನಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಗೆ ಅನ್ವಯಿಸುತ್ತದೆ. |
| ಇ) | ಬಂದಿದ್ದಲ್ಲಿ, ಅದಕ್ಕೆ ಕಾರಣಗಳೇನು ಮತ್ತು ವಿದ್ಯುತ್ ಸಂಪರ್ಕ ಸಿಗದೆ ಸಾರ್ವಜನಿಕರಿಗೆ ಮತ್ತು ಸಣ್ಣ ಉದ್ದಿಮೆದಾರರಿಗೆ ಆಗಿರುವ ತೊಂದರೆಯನ್ನು ನಿವಾರಿಸಲು ಸರ್ಕಾರ ಇದುವರೆಗೆ ಏನು ಕ್ರಮ ಕೈಗೊಳ್ಳಲಾಗಿದೆ; | |
| ಈ) | ಗೃಹ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಂಪರ್ಕ ಅತ್ಯಂತ ಅವಶ್ಯಕ ಮತ್ತು ಅನಿವಾರ್ಯತೆಯಿರುವ ಹಿನ್ನೆಲೆಯಲ್ಲಿ ಕೋರಿರುವ ಸಾವಿರಾರು ಅರ್ಜಿದಾರರಿಗೆ ಸರ್ಕಾರ ಯಾವ ಕಾಲಮಿತಿಯೊಳಗೆ ವಿದ್ಯುತ್ ಸಂಪರ್ಕ ಒದಗಿಸುವುದು? | |

ಸಂಖ್ಯೆ: ಎನರ್ಜಿ 191 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:638ಕ್ಕೆ ಅನುಬಂಧ:**

**ಆರ್ಥಿಕ ವರ್ಷ 2024-25 ಮತ್ತು 2025-26ನೇ ಸಾಲಿನಲ್ಲಿ ( ಏಪ್ರಿಲ್ 25 ರಿಂದ ಜುಲೈ 25 ರ ಅಂತ್ಯಕ್ಕೆ) ವಿದ್ಯುತ್ ಸಂಪರ್ಕ ಕೋರಿ ಎಸ್ಕಾಂಗಳಿಗೆ ಬಂದ ಎಲ್ಲಾ ಜಕಾತಿ ( ಎಲ್.ಟಿ 1 to 6 & ಹೆಚ್.ಟಿ 1 to 7) ಅರ್ಜಿಗಳು, ವಿದ್ಯುತ್ ಸಂಪರ್ಕ ನೀಡಿರುವ ಮತ್ತು ಬಾಕಿಯಿರುವ ಅರ್ಜಿಗಳ ಸಂಖ್ಯೆಗಳ ಎಸ್ಕಾಂವಾರು ವಿವರಗಳು:**

**ಆರ್ಥಿಕ ವರ್ಷ : 2024-25**

| ವಿ.ಸ.ಕಂಪನಿ ಹೆಸರು | ಓಪನಿಂಗ್ ಬ್ಯಾಲೆನ್ಸ್ | ವಿದ್ಯುತ್ ಸಂಪರ್ಕ ಕೋರಿ ಬಂದ ಅರ್ಜಿಗಳ ಸಂಖ್ಯೆ | ಒಟ್ಟು ಅರ್ಜಿಗಳ ಸಂಖ್ಯೆ | ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ | ವಿದ್ಯುತ್ ಸಂಪರ್ಕ ಪಡೆದ ಅರ್ಜಿಗಳ ಸಂಖ್ಯೆ | ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ |
|---|---|---|---|---|---|---|
| | 1 | 2 | 3=1+2 | 4 | 5 | 6=3-4-5 |
| ಬೆಸ್ಕಾಂ | 21,210 | 5,95,526 | 6,16,736 | 42,933 | 5,00,127 | 73,676 |
| ಮೆಸ್ಕಾಂ | 10,576 | 1,28,165 | 1,38,741 | 15,348 | 96,584 | 26,809 |
| ಸೆಸ್ಕ್ | 4,231 | 1,07,822 | 1,12,053 | 16,529 | 71,236 | 24,288 |
| ಹೆಸ್ಕಾಂ | 16,930 | 2,02,051 | 2,18,981 | 22,758 | 1,50,327 | 45,896 |
| ಜೆಸ್ಕಾಂ | 40,175 | 1,12,829 | 1,53,004 | 19,996 | 74,678 | 58,330 |

**ಆರ್ಥಿಕ ವರ್ಷ : 2025-26 ( ಏಪ್ರಿಲ್ 25 ರಿಂದ ಜುಲೈ 25 ರ ಅಂತ್ಯಕ್ಕೆ)**

| ವಿ.ಸ.ಕಂಪನಿ ಹೆಸರು | ಓಪನಿಂಗ್ ಬ್ಯಾಲೆನ್ಸ್ | ವಿದ್ಯುತ್ ಸಂಪರ್ಕ ಕೋರಿ ಬಂದ ಅರ್ಜಿಗಳ ಸಂಖ್ಯೆ | ಒಟ್ಟು ಅರ್ಜಿಗಳ ಸಂಖ್ಯೆ | ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ | ವಿದ್ಯುತ್ ಸಂಪರ್ಕ ಪಡೆದ ಅರ್ಜಿಗಳ ಸಂಖ್ಯೆ | ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ |
|---|---|---|---|---|---|---|
| | 1 | 2 | 3=1+2 | 4 | 5 | 6=3-4-5 |
| ಬೆಸ್ಕಾಂ | 73,676 | 33,388 | 1,07,064 | 3,841 | 8,639 | 94,584 |
| ಮೆಸ್ಕಾಂ | 26,809 | 53,308 | 80,117 | 5,203 | 36,141 | 38,773 |
| ಸೆಸ್ಕ್ | 24,288 | 35,461 | 59,749 | 4,967 | 36,699 | 18,083 |
| ಹೆಸ್ಕಾಂ | 45,896 | 53,111 | 99,007 | 8,584 | 24,067 | 66,356 |
| ಜೆಸ್ಕಾಂ | 58,330 | 26,212 | 84,542 | 3,938 | 8,074 | 72,530 |